Matter Under Rule 146

re.—Dissolution of State Assemblies

ಶ್ರೀ ಆರ್. ಗುಂಡೂರಾವ್.—ಮೊನ್ನೆ ದಿವಸ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಿಷಯವನ್ನು ಸಭೆಯಲ್ಲಿ ಚರ್ಚೆ ಮಾಡಬೇಕು ಎಂದು ತೀರ್ಮಾನ ಮಾಡಿದ್ದೆವು. ನಿನ್ನೆ ದಿವಸ ರಾಜ್ಯ ಸಭೆಯಲ್ಲಿ ಸಭಾಪತಿಗಳು ಒಂದು ರೂಲಿಂಗ್ ಕೊಟ್ಟು ಸದನದಲ್ಲಿ ಚರ್ಚೆ ಮಾಡುವುದು ಸಬ್‌ಜ್ಯುಡೀಸ್ ಆಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಸ್ವಲ್ಪ ಚರ್ಚೆ ಮಾಡಿ ಅವಕಾಶ ಕೊಡಬೇಕೇ ಬೇಡವೇ ಎಂಬುದನ್ನು ನೋಡಬೇಕಾಗುತ್ತದೆ. ಈಗ ಮುಂದೆ ಪಾಸ್ ಮಾಡಬೇಕಾದ ಮಸೂದೆಗಳನ್ನು ಚರ್ಚೆಗೆ ತೆಗೆದುಕೊಳ್ಳೋಣ.

SRI D. DEVARAJ URS.—So far as this rosolution is concerned, twice it has been listed in the agenda and postponed. I would like to know from the Hon. Speaker whether it is the intention to take it up or not to take it up.

MR. SPEAKER.—I am trying to understand both the sides.

SRI D. DEVARAJ URS.—What is it that we can do? It is within the competence of the Speaker to fix a time and day for all these things. And once you fix it up, you must stick to it. Something must be done about it. As the Hon. Chief Minister mentioned, there is some ruling in the Rajya Sabha in this regard. We have to discuss it against that background. If you are prepared to take it up tomorrow, let us have it tomorrow. Otherwise every time it is taken, something happens and it is postponed. That is why we can only appeal to the Speaker to fix a time

SRI B. B. SAYANAK.—Sir, the Leader of the Opposition is right. Yesterday, in the Business Advisory Committee Meeting, we have decided that from 4.00 P. M. onwards, we must discuss the resolution regarding the dissolution of the nine Assemblies in the nine States.

SRI K.H. RANGANATH.—On a point of order, Sir. I do not know whether the hon. Member Sri Sayanak is a member of the Business Advisory Committee or not.

SRI B. B. SAYANAK.—Yes, I am.

SRI K. H. RANGANATH.—If that is the case, he should not have divulged what has taken place there. That is the first issue,

MR. SPEAKER.—What is the issue now? Under what rule does he want to raise a point of order.

SRI K. H. RANGANATH.—Sir, my point of order is this. This item should not have been put in the agenda.

MR. SPEAKER.—I may tell the Hon. Member Sri Ranganath that we have already fixed the time for discussion on the dissolution of Assemblies. Now we will take it up.

SRI K.H. RANGANATH.—My point is this. This subject should not have been put in the agenda at all. The Business Advisory Committee may take a decision but still the proceedings of the Business Advisory Committee will have to be put before the House and if the House approves it, it becomes final and then only will it find a place in the agenda. Otherwise, merely because a decision has been taken in the Business Advisory Committee that a particular item should be included in the agenda, the House cannot discuss that. I want a ruling on this point. Secondly, as regards Rule, 146 if the Speaker were to take a decision to take up the matter today, I want a ruling first in respect of my point of order which I have raised. Then only I will speak on the other matters namely whether it can be discussed under rule 146 and so on.

SRI A. LAKSHMI SAGAR.—Sir, the matter was raised by Sri S. R. Bommai in the form of an adjournment motion perhaps on the very first day of the meeting of the House. Then, in consultation with the Leader of Opposition and with the consent of the Leader of the House, it was agreed that a resolution may be tabled. Later on it was agreed that a mutually agreed date may be fixed for the purpose of taking up this resolution. This was being considered and formally the matter came up before the Business Advisory Committee. A final date and time was agreed upon by the Committee and it has now come before the House. It has been so for the last two weeks. As a matter of fact, it was announced in the House and the House is seized of the matter and there is no point in going back upon it. My Learned Friend Sri Ranganath may not have been present when this took place. Not that I am taking objection to his not being here. He cannot raise a point of order on a matter where there in neither a point nor order.

SRI S.M. SHEERNALY CHANDRASHEKAR.—The Business Advisory Committee is governed by the rules of procedure. It is a part and parcel of this House and it has to go through the Rules of procedure.

Sir, Rule No. 148(viii) is very clear. It is very clearly stated that any matter which is under adjudication by a court of law cannot be taken up on the Floor of the House.

Sir, before taking any subject-matter on the Floor of the House, we have to follow the Rules of Procedure. We have to go through Rule No. 148(viii). This subject-matter is pending before Three High Courts in India. Can we discuss that matter? How can it appear on the agenda itself? That is my question.

SRI K.H. RANGANATH.—I have not been properly understood by the House. This is not a matter pertaining to me alone but it is a matter pertaining to the whole House itself, and the Hon. Speaker will have to take the whole thing into consideration and has to give a ruling. ಒಂದು ಸಲ ಒಂದು ವಿಷಯ ಕಾರ್ಯಕಲಾಪದ ಪಟ್ಟಿಯಲ್ಲಿ ಸೇರಿ ಅದು ಸದನದಲ್ಲಿ ಚರ್ಚೆಯಾಗಲಿಲ್ಲವೆಂದರೆ ಅದು ಲ್ಯಾಪ್ಸ್ ಆದಂತೆಯೆ. ಉದಾಹರಣೆಗೆ ಹೇಳುವುದಾದರೆ, ಪ್ರಶ್ನೋತ್ತರ ವೇಳೆಯಲ್ಲಿ, ಕಾರ್ಯ ಕಲಾಪದ ಪಟ್ಟಿಯಲ್ಲಿ ನಮೂದಾದ ಪ್ರಶ್ನೆಗಳನ್ನು ಚರ್ಚೆಗೆ ತೆಗೆದುಕೊಂಡಾಗ ಸಂಬಂಧಪಟ್ಟ ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರೆ ಆ ಪ್ರಶ್ನೆ ಲ್ಯಾಪ್ಸ್ ಆಗುತ್ತದೆ. ಹಾಗೆ ಲ್ಯಾಪ್ಸ್ ಆದ ಪ್ರಶ್ನೆಯನ್ನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಹಾಗೆಯೇ ಈ ವಿಷಯದಲ್ಲೂ ಸಹ ಅದು ಲ್ಯಾಪ್ಸ್ ಆಗುತ್ತದೆ. I remember this subject was there in the agenda on a particular day and subsequently it was not there. Suddenly, it was put in to-day's agenda. Now, Sri Sayanak was kind enough to divulge the information to the House that it was discussed in the Business Advisory Committee yesterday. When that is the case, why it was not put before the House for its acceptance? ಹಿಂದಿನ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿ ಮುಂದೆ ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಂಡು, ಆ ತೀರ್ಮಾನವನ್ನು ಸಭೆಯ ಮುಂದಿಟ್ಟು. ಸಭೆಯ ಅನುಮತಿ ಪಡೆದು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಿದ್ದು, ಚರ್ಚೆಯಾಗದೆ ಅದನ್ನು ಮುಂದಿನ ದಿನಕ್ಕೆ ಮುಂದುವರಿಸಿಕೊಡುವುದು ಬೇರೆ ವಿಚಾರ ಆದರೆ, ಇಲ್ಲಿ ಹಾಗೆ ಆಗಿಲ್ಲ. The Business Advisory Committee has again considered the matter afresh ಈ ದೃಷ್ಟಿಯಿಂದ ವಿಚಾರ ಮಾಡಿದಾಗ, ಇದು ಮತ್ತೆ ಸಭೆಯ ಒಪ್ಪಿಗೆಗಾಗ ಬರಬೇಕಾಗಿತ್ತು. ಆಗ ಮಾತ್ರ ಇದು ಕಾರ್ಯ ಕಲಾಪಗಳ ಪಟ್ಟಿಯಲ್ಲಿ ಬರಲಿಕ್ಕೆ ಸಾಧ್ಯ. ಆದುದರಿಂದ, ತಾವು ಇದನ್ನು ಪರಿಶೀಲಿಸಿ ರೂಲಿಂಗ್ ಕೊಡಬೇಕೆಂದು ಒತ್ತಾಯ ಮಾಡಬಯಸುತ್ತೇನೆ.

SRI B. BASAVALINGAPPA.—Before any arguments are made, I want to know whether the Proceedings of the Business Advisory Committee were placed before the House and they were approved by the House If you say 'Yes', then the arguments have no relevance.

ಶ್ರೀ ಕೆ. ಹೆಚ್, ರಂಗನಾಥ್.—ಈ ವಿಚಾರ ಮತ್ತೆ ನಿನ್ನೆ ದಿವಸ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾಪವಾಗಿತ್ತೆಂದು ಮಾನ್ಯ ಸಯನಕ್ ಅವರು ಹೇಳಿದ್ದಾರೆ. ಒಂದು ವೇಳೆ ಆ ದಿವಸವೇ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಇಂದು ತೆಗೆದುಕೊಳ್ಳಲು ಒಪ್ಪಿಗೆ ಕೊಟ್ಟಿದ್ದರೆ, ಮತ್ತೆ ನಿನ್ನೆಯ ದಿವಸದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಇದನ್ನು ಇಂದು ತೆಗೆದುಕೊಳ್ಳಲು ಪ್ರಸ್ತಾಪ ಮಾಡುವ ಅಗತ್ಯವಿರಲಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ.—ನಿನ್ನೆ ಈ ವಿಚಾರ ಬಂದದ್ದು ಕೇವಲ ಕಾಲ ನಿಗದಿ ಮಾಡಲು ಮಾತ್ರ.

SRI K.H. RANGANATH —Still they are making the case worst. It has found a place in the agenda on the particular point of time. ನಿನ್ನೆ ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ವಿಷಯವನ್ನು ಇಂದಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಬೇಕೆಂದು ಒಪ್ಪಿದ ಮೇಲೆ ಅದನ್ನು ಇಂದು ಸಭೆಯ ಮುಂದಿಟ್ಟು, ಅದಕ್ಕೆ ಸಭೆಯ ಒಪ್ಪಿಗೆ ಪಡೆದರೆ ಮಾತ್ರ ಅದು ಕ್ರಮವಾಗುತ್ತದೆ, ಇಲ್ಲದಿದ್ದರೆ ಕ್ರಮವಾಗುವುದಿಲ್ಲ. ಇದು ನನ್ನ ಅಂಶ.

ಅಧ್ಯಕ್ಷರು.—ಈ ಸದನದ ಸಂಪ್ರದಾಯವೇನೆಂದರೆ, ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ಸೇರಿ, ಎಷ್ಟು ದಿವಸ ಸಭೆಯನ್ನು ನಡೆಸಬೇಕು ಮತ್ತು ಯಾವ ಯಾವ ಕಾರ್ಯಕಲಾಪಗಳನ್ನು ನಡೆಸಬೇಕು ಎನ್ನುವುದನ್ನು ತೀರ್ಮಾನ ಮಾಡಲಾಗುವುದು ಮತ್ತು ಅದರಂತೆ ಸಭೆ ನಡೆಯುವುದು. This is the usual convention. ಇವತ್ತು ಬೆಳಿಗ್ಗೆ ಸಲಹಾ ಸಮಿತಿ ಸಭೆಯಲ್ಲಿ ಈ ವಿಚಾರವನ್ನು

ಪ್ರಸ್ತಾಪ ಮಾಡಿ, ಅದನ್ನು ಕಾರ್ಯಕಲಾಪದಲ್ಲಿ ತೆಗೆದುಕೊಳ್ಳೋಣವೆಂದು ತೀರ್ಮಾನ ಮಾಡಿದ ಮೇಲೆ ಅದನ್ನು ಅಂದೇ ಸಭೆಯ ಒಪ್ಪಿಗೆ ಪಡೆಯಬೇಕಾಗಿರುವುದಿಲ್ಲ. ಅದು ಸಂಪ್ರದಾಯವೂ ಅಲ್ಲ. ಇವತ್ತಿನ ಕಾರ್ಯಕಲಾಪಗಳು ಅಪ್ರೂವ್ ಆಗಿ ನಿನ್ನೆಯ ದಿವಸವೇ ಸದಸ್ಯರಿಗೆ ಹೊರಟು ಹೋಗಿರುತ್ತದೆ. ಆದುದರಿಂದ, ಇದಕ್ಕೆ ಸಭೆಯ ಮುಂದಿಟ್ಟು ಒಪ್ಪಿಗೆ ಪಡೆಯಬೇಕಾದ ಅವಶ್ಯಕತೆ ಇರುವುದಿಲ್ಲ. Reply to the debate on the motion of thanks and Discussion on the special motion regarding the disolution of State Assemblies. ಈ ಎರಡು ವಿಷಯಗಳನ್ನು ೧೧ನೇ ಮಾರ್ಚ್ ೧೯೮೦ ರಂದು ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಆದರೆ, ಆ ದಿವಸ ಸಮಯವಿಲ್ಲದಿದ್ದ ಕಾರಣ ಒಂಬತ್ತು ರಾಜ್ಯಗಳನ್ನು ವಿಸರ್ಜಿಸಿರುವ ಬಗ್ಗೆ ಇದ್ದ ವಿಶೇಷ ಪ್ರಸ್ತಾಪವನ್ನು ಚರ್ಚೆಗೆ ತೆಗೆದುಕೊಳ್ಳಲಾಗಲಿಲ್ಲ, ನಿನ್ನೆ ದಿವಸ ಸಲಹಾ ಸಮಿತಿ ಸಭೆ ಸೇರಿ. ಇದನ್ನು ಇಂದು ತೆಗೆದುಕೊಳ್ಳಲು ಎರಡೂ ಕಡೆಯವರನ್ನು ಕೇಳಲಾಗಿ ಅವರು ಒಪ್ಪಿಗೆ ಕೊಟ್ಟಿರು ಮತ್ತು ಅದರಂತೆ ಇದನ್ನು ಕಾರ್ಯಕಲಾಪಗಳ ಪಟ್ಟಿಯಲ್ಲಿ ಸೇರಿಸಲಾಗಿದೆ ಇದು ಸರಿಯಾದ ಕ್ರಮ ವಾಗಿರುವುದರಿಂದ, ಇಲ್ಲಿ ಕ್ರಿಯಾಲೋಪ ಉದ್ಭವಿಸುವುದಿಲ್ಲ.

SRI K.H. RANGANATH.—May I submit to revise your decision ?

MR. SPEAKER.—There is no necessity......

SRI M.C. NANAIAH.—I rise on a point of order. The member is questioning the ruling of the Chair. His point of order has been ruled out.

4-30 P.M.

Mr. Speaker Sir, my learned Senior friend Sri K.H. Ranganath has raised a point of order...

ಶ್ರೀ ಕೆ. ಹೆಚ್. ರಂಗನಾಥ.— ಸ್ವಾಮಿ, ನಾನು ಯಾವ ಪಾಯಿಂಟ್ ಆಫ್ ಆರ್ಡರನ್ನು ಎತ್ತಲಿಲ್ಲ, ತಾವು ಕೊಟ್ಟಿರತಕ್ಕ ತೀರ್ಮಾನವನ್ನು ಪುನರ್‌ವಿಮರ್ಶೆ ಮಾಡಿ ಎಂದು ಕೇಳುವುದಕ್ಕೆ ಎದ್ದು ನಿಂತಿದ್ದೇನೆ. ಇದರಲ್ಲಿ ಯಾವ ಪಾಯಿಂಟ್ ಆಫ್ ಆರ್ಡರ್ ಬರುತ್ತೆ ?

SRI M.C. NANAIAH.—I am speaking on the earlier point of Order raised by my friend regarding validity of the Subject matter in the agenda.

SRI H, GANGADHARAN.—Mr. Speaker Sir, under what provision your ruling can be revised ?

ಅಧ್ಯಕ್ಷರು.—ತಾವು ಒಟ್ಟಿಗೆ ಎರಡು ಮೂರು ಜನ ಎದ್ದು ನಿಂತುಕೊಂಡರೆ ನಾನು ಯಾರಿಗೆ ಅವಕಾಶ ಕೊಡಲಿ ?

SRI M. VEERAPPA MOILY.—I am just assisting the House. ನಾವು ನಿನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಯಾವ ರೀತಿ ಬಿಸಿನೆಸ್ ರೆಗ್ಯುಲರ್ ಮಾಡಬೇಕು ಅಂತ ತೀರ್ಮಾನ ಮಾಡಿದೆವು, ಅದೇ ರೀತಿ ಇವತ್ತಿನ ಅಜೆಂಡಾದಲ್ಲಿ ಮಾಡಿದ್ದಾರೆ. ಮಾನ್ಯ ಸದಸ್ಯರು ಪ್ರಶ್ನೆ ಎತ್ತಿರ ತಕ್ಕಂಥಾದ್ದು ಅಧ್ಯಕ್ಷರು ಕೊಟ್ಟಿರತಕ್ಕ ತೀರ್ಮಾನದ ಬಗ್ಗೆ. ಅಡ್ಮಿಸಿಬಿಲಿಟಿ ಬಗ್ಗೆ ಪ್ರಶ್ನೆ ಎತ್ತಬಹುದು.

SRI HARNALLI RAMASWAMY.—My friend is raising regarding the admissibility of the subject matter of the resolution.

SRI M. VEERAPPA MOILY.—There are two things or two distinct features. Firstly, about regulating the business; of course the hon.

Speaker was pleased to rule that is in order. Another point is regarding the admissibility. Now you have to raise the issue; after the admissibility dispute is setteled, it could be debatable. About the question of regulating the business, you have already given the ruling and it is binding. When the question of admissibility comes, it is open to the members of both the sides to speak about it.

ಶ್ರೀ ಕೆ. ಹೆಚ್. ರಂಗನಾಥ್ —ಸ್ವಾಮಿ, ಅಧ್ಯಕ್ಷರೆ ನಾನು ಪ್ರಸ್ತಾಪ ಮಾಡಿರತಕ್ಕಂಥಾದ್ದು ಇಡೀ ಸಭೆಗೆ ಸಂಬಂಧಪಟ್ಟ ವಿಷಯವಾಗುತ್ತದೆ. ತಾವು ಒಂದು ತೀರ್ಮಾನ ಕೊಟ್ಟಿರಿ, ಅದು ನನ್ನ ಮನಸ್ಸಿಗೆ ತಾವು ಕೊಟ್ಟ ತೀರ್ಮಾನ ಸರಿಯಲ್ಲ ಅಂತ ಕಂಡು ಬಂದಮೇಲೆ, ಪುನರ್ವಿಮರ್ಶೆ ಮಾಡಿ ಅಂತ ಹೇಳತಕ್ಕ ಹಕ್ಕು ನನಗಿದೆ. ವಿಚಾರ ಮಾಡಲಿಕ್ಕೆ ತಮಗೂ ಹಕ್ಕು ಇದೆ. ಈ ದೃಷ್ಟಿಯಿಂದ ನಾನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಸದಸ್ಯರು ವಕೀಲರು ಕೂಡ ಆಗಿದ್ದಾರೆ.

ಶ್ರೀ ಎಂ.ಸಿ ನಾಣಯ್ಯ.—ಸ್ವಾಮಿ, ಅವರು ರೈಸ್ ಮಾಡಿರತಕ್ಕ ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಟ್ಟಿದ್ದೀರಿ, ಮತ್ತೆ ಅವರು ಮಾತನಾಡುವುದಕ್ಕೆ ಅವಕಾಶ ಕೊಡುವುದು ಸರಿಯಲ್ಲ. I am an advocate and I am well within my bounds, but unfortunately my learned friend Sri Ranganath is not within his bounds.

SRI K.H. RANGANATH.—I am not appealing to Sri Nanaiah, but I am appealing Mr. Speaker only, ಪುನರ್ವಿಮರ್ಶೆ ಮಾಡುವ ಹಕ್ಕು ತಮಗೆ ಇದೆ ಯೆಂದು ಭಾವಿಸಿದ್ದೇನೆ. ಇಲ್ಲದೇ ಹೋದರೆ ಇಲ್ಲ ಅಂತ ಹೇಳಬಹುದು. ಕೇಳತಕ್ಕ ಹಕ್ಕು ನಮಗೂ ಇದೆ. ಇದು ಒಂದು ಪಕ್ಷಕ್ಕೆ ಸಂಬಂಧಪಟ್ಟ ವಿಷಯವಲ್ಲ, ಸಭೆಗೆ ಸಂಬಂಧಪಟ್ಟ ವಿಷಯವಾದ್ದರಿಂದ ಹೇಳುತ್ತಿದ್ದೇನೆ.

SRI C.M. ARUMUGHAM.—Sir, I rise to a point of Order. I want to make submission on the point of order. My point of order is, when the Speaker gives an order or when he gives a ruling on the point of order, there is no provision in the Rules of Procedure to make an appeal to the Speaker again to revise his ruling. That is not there and I want to quote the relevant rules *i.e.*, 313. Once a ruling is given by the Speaker usually it is adhered to. You have also power to see that your decision is enforced· You have given the ruling, that there is no point of order. Therefore, you must preserve the order and enforce your ruling or decision and if you allow again to appeal to you to revise your ruling, it will become a bad precedent. You must not allow it.

MR. SPEAKER.—Who said that the Speaker has allowed it? Now, I call Sri D. Devaraj Urs to move the motion under rule 144.

SRI D. DEVARAJ URS.—Sir, I beg to move:

"That the situation arising out of the dissolution of the 9 Assemblies in 9 states without assigning any reason by the proclomation of the president be taken into consideration".

The question was proposed.

ಶ್ರೀ ಪಿ. ಎನ್. ರೆಡ್ಡಿ.—ಸ್ವಾಮಿ, ವಿರೋಧಪಕ್ಷದ ನಾಯಕರು ಎತ್ತಿರತಕ್ಕ ವಿಚಾರವನ್ನು ಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದೆ ಎಂಬ ಬಗ್ಗೆ ತಮ್ಮಿಂದ ರೂಲಿಂಗ್ ಬೇಕಾಗಿದೆ. ಇದರ ಬಗ್ಗೆ ನನ್ನ ಕ್ರಿಯಾಲೋಪ ಏನು ಅಂತ ಹೇಳಿದರೆ, ಅಲಹಾಬಾದ್, ಲಕ್ನೊ ಹಾಗೂ ಮಹಾರಾಷ್ಟ್ರ ಹೈಕೋರ್ಟುಗಳ ಮುಂದೆ ಈ ವಿಷಯ ಇರುವುದರಿಂದ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟರೆ 'ಸಬ್‌ಜುಡೀಸ್' ಆಗುತ್ತದೆ, ಆದ್ದರಿಂದ ನಮಗೆ ತಮ್ಮಿಂದ ರೂಲಿಂಗ್ ಬೇಕೆಂದು ಕೇಳುತ್ತೇನೆ.

SRI S.M SHEERNALI CHANDRASHEKHAR.—In the earlier part of the discussion I said and I quoted that they have brought this resolution under rule 148. It shall not relate to any matter under adjudication in a court of law having jurisdiction in any part of the country. I shall draw your attention to the sub-clause(8) of the rule 148, under which the hon. Leader of the Opposition has brought this resolution.

> "It shall not relate to any matter which is under adjudication by a court of law having jurisdiction in any part of India"

Sir, the very same subject matter is pending in U.P., Allahabad and Maharashtra High Courts. They have to decide the issue. And Sir, the Chairman of the Rajya Sabha, who is no less a person than the Ex-Chief Justice of the Supreme Court has given a ruling on this issue. He said since this issue is pending before a court of law, this matter cannot be discussed on the floor of the House.

(ಹೆಚ್. ಟಿ. ಕೃಷ್ಣಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

Further if the Chair is going to take up this issue, I may be permitted to say that last time in 1977 when they have approached the Supreme Court, the Supreme Court gave a ruling. Based on that ruling we cannot take up the discussion here. I want a ruling from the Chair on this point.

ಶ್ರೀ ಬಿ. ಎ. ಕಕ್ಕಿಲಾಯ.—ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್ ಅವರು ಏನು ಪ್ರಶ್ನೆ ಎತ್ತಿದ್ದಾರೆ ಅದು ಪ್ರೊಕ್ಲಮೇಷನ್ ವ್ಯಾಲೇಡ್ ಹೌದೇ ಅಲ್ಲವೆ ಎನ್ನುವುದರ ಬಗ್ಗೆ ಇದೆ. ಆ ವಿಚಾರವನ್ನು ನಾವು ಚರ್ಚೆ ಮಾಡುತ್ತಿಲ್ಲ. ಪ್ರೊಕ್ಲಮೇಷನ್ ವ್ಯಾಲೆಡ್ ಹೌದೇ ಅಲ್ಲವೇ ಸಂವಿಧಾನ ಪ್ರಕಾರ ಅದು ಸರಿಯೋ ತಪ್ಪೋ ಎಂದು ಚರ್ಚೆ ಮಾಡುತ್ತಿಲ್ಲ. ಈಗ ನಾವು ಚರ್ಚೆ ಮಾಡುತ್ತಿರುವುದು ಅವರು ಮಾಡಿರುವುದು ನ್ಯಾಯವೇ ಎನ್ನುವುದು. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದವರು ತಕ್ಷಣ ಬೇರೆ ಪಕ್ಷದವರು ಎಲ್ಲೆಲ್ಲಿ ಅಧಿಕಾರ ಮಾಡುತ್ತಾರೊ ಅವರನ್ನೆಲ್ಲಾ ಬರಖಾಸ್ತು ಮಾಡಬೇಕು ಅನ್ನುವ ಧೋರಣೆ ಸರಿಯೋ, ತಪ್ಪೋ, ಇದರಿಂದ ದೇಶದಲ್ಲಿ ಏನು ಪರಿಣಾಮವಾಗುತ್ತದೆ. ನಮ್ಮ ಅಸೆಂಬ್ಲಿ ಮೇಲೆ ಏನು ಪರಿಣಾಮವಾಗುತ್ತದೆ. ಶಾಸಕರ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ನಾವು ನೋಡಬೇಕಾಗುತ್ತದೆ. ನಾವು ಚರ್ಚೆ ಮಾಡತಕ್ಕ ವಿಚಾರಕ್ಕೂ ಸಂವಿಧಾನಕ್ಕೂ ಇದು ಬದ್ಧವಾಗಿದೆಯೋ ಇಲ್ಲವೇ ಅಂತ ಕೋರ್ಟಿನಲ್ಲಿರುವ ಪ್ರಶ್ನೆಗೂ ಇದಕ್ಕೂ ಸಂಬಂಧವಿಲ್ಲ. ಈ ಪ್ರಶ್ನೆಯನ್ನು ನಾವು ಚರ್ಚೆ ಮಾಡುವುದಿಲ್ಲ. ನಾವು ಚರ್ಚೆ ಮಾಡುವುದೇ ಬೇರೆ, ಆದುದರಿಂದ ಇದನ್ನು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಈಗ ಮಾನ್ಯ ಅಧ್ಯಕ್ಷರು ಇದಕ್ಕೆ ಅವಕಾಶ ಮಾಡಿ ಕೊಟ್ಟಿರುವುದು ಸರಿ ಅಂತ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಈ ಆಡ್ಮಿಸಿಬಿಲಿಟಿ ಮೇಲೆ ಈ ಸದನದಲ್ಲಿ ಕ್ರಿಯಾಲೋಪ ಎತ್ತಿರುವ ಕಾರಣ ಎರಡು ಕಡೆಯ ಸದಸ್ಯರಿಗೂ ಇದರ ಬಗ್ಗೆ ಅವಕಾಶ ಕೊಟ್ಟರೆ ಯುಕ್ತ ನಿರ್ಣಯ ಮಾಡಲಿಕ್ಕೆ ಅನುಕೂಲವಾಗುತ್ತದೆ. ಈಗ ಒಬ್ಬರು ಎರಡು ವಾಕ್ಯ ಹೇಳಿದ ಕೂಡಲೇ ಮತ್ತೊಬ್ಬರು ಹೇಳುವುದಾದರೆ ಇದರಿಂದ ತಮಗೆ ಸರಿಯಾದಂಥ ಒಂದು ನಿರ್ಣಯವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ, ಈಗ ಆಡ್ಮಿಸಿಬಿಲಿಟಿ ಬಗ್ಗೆ ಪ್ರಶ್ನೆ ಎತ್ತಿರುವ ಕಾರಣ ಎರಡು ಕಡೆಯ ಸದಸ್ಯರಿಗೂ ಅವಕಾಶ ಕೊಟ್ಟು ನಂತರ ವಿರೋಧ ಪಕ್ಷದ ನಾಯಕರಿಗೂ ಅನುಮತಿ ಕೊಟ್ಟರೆ ಅನುಕೂಲ ವಾಗುತ್ತದೆ.

SRI G. P. VADEYRAJ.—Mr. Speaker Sir, I am inclined to support the point of order raised by my friend Sri Sheernali Chandrashekhar over the admissibility of the motion which is now moved by the Leader of the Opposition has been pointed out by my friend, that the motion was moved under Rule 146 and according to Rule .46 clause (8) this matter is *sub-judice* ; it is pending before the Court of law. So, it cannot be taken up This apart, I would like to draw the attention of the Chair to rule 272 : It reads like this :

> "This Speaker may amend or disallow a motion which in his opinion does not comply with the rules"
>
> 2. The Speaker may disallow any motion or part of a motion on the ground that it relates to a matter which is not primarily the concern of the State Government"

I want to stress this last sentence of clause (2) of Rule 272. The matter which has been moved by the leader of the opposition in primarly the concern of the Parliament ; it is in no way the concern of the State Government and this Assembly which is supposed to discuss, debate and decide matters relating to the State, but not the matter pertains to the Centre. Therefore, I submit that, this is a matter which is out of the purview of the State Assemblies and so we cannot take up this matter here. This is because, as you know the leader of the opposition wants this House to take into consideration and debate the matter pertaining to the disselution of the 9 State Assemblies in the country, which were earlier governed by non-congress Governments.

That is a matter which pertains to the Government of India. In the matter of dissolution, the Government of India has taken a decision ; and it is a matter which falls within the purview and jurisdiction of the Parliament of India. Therefore, the point of order raised by my friend Sri Sheernali Chandrashker is in order. I request you kindly to uphold the point of order.

Secondly, as you have noticed, the Chairman, Rajya Sabha has ruled out yesterday in the matter. He has stated that the dissolution of 9 State Assemblies cannot be discussed and decided in the House since it is pending before the court of law. In view of the fact that the Chairman of Rajya Sabha ruled out its discussion on the floor of the House, I request you to uphold the point of order raised by Sri Shreernali Chandrashekhar.

MR. CHAIRMAN.—There are two aspects. Firstly the stage of admissibilty. The stage of admissibility is over. The second point is about *sub-judice*. If anybody has got view about the *sub-judice* they can express it.

SRI HARNALI RAMASWAMY.—Since the mover has already moved it, the maintainability question does not arise.

SRI S. M. SHEERNALI CHANDRASHEKHAR.—I have raised a point only on the maintainability.

SRI P. N. REDDY.—I was the first man to raise the point of order on this matter. I spoke in Kannada and said that since the matter is in the court of law it cannot be raised on the floor of this House. Please give a ruling.

MR. CHAIRMAN.—I consider it as a point of order.

† SRI M. C. NANAIAH.—Sir, when this issue came up before th Business Advisory Committee yesterday, a decision has been taken to take up this subject today, Subsequently the Speaker has admitted that motion, and it has come in the agenda of the House today. And accordingly the leader of the opposition has moved it. Now it has to be allowed for discussion-after discussion whether it has to be thrown out or not is a different issue. The question of *sub-judice* should have been considered by the Speaker when he is admitting the motion. In this connection Rule 272 sub-clause (3) clearly and specifically lays down that when a motion or question which has not been admitted by the Speaker shall not be entered in the list of business or printed in the official report of the proceedings.

Now, the question before us is whether the matter should be admitted or not. Whether it is *sub-judtce* or not has to be considered at this stage. Sir, when the Hon'ble Speaker has given consent and when once subject has already appeared in the list of business the question of *sub-judice* does not arise. It is not correct. It should have been decided before agreeing to take up the subject to-day. Now having given consent to take up the subject for dicussion and having decided at yesterday's meeting alloting time

for two hours *ie.*, between 4 and 6–00 p.m. we can discuss the same even upto 6–30 p.m. It was also agreed by the Leader of the House at the meeting that it may be taken up for discussion between 4–00 and 6–00 p m. In such a case the question of *sub-judice* in this matter does not arise.

SRI SHEERNALY CHANDRASEKHAR.—He is arguing a bad case.

SRI M. C. NANAIAH.—Sir, my learned friend Sri Chandrasekhar has said that I am arguing a bad case. Let me argue the bad case which is going to be good. The only point I would like to submit is that whether the subject matter can be considered as *sub-judice*, when once the Speaker has given consent to a motion after considering all relevant aspects of it and when once the Speaker has fixed time for the discussion on this motion, the question of *sub-judice* does not arise at all. Mr. Speaker, Sir, I would like to draw the attention of the House to the agenda. In today's agenda the motion has found a place for discussion between 4–00 & 6–00 p.m.

SRI K. H. RANGANATH.—Sir, I am on a point of order.

SRI M. C. NANAIAH.—Sir, whenever a Member is on his legs it is not correct on the part of other Members to interrupt his speech. If this becomes the practice I think we can also raise points of order and interrupt them while they are speaking.

ಛೇರ್ಮನ್,—ಯಾರಾದರೂ ಸದಸ್ಯರು ಕ್ರಮಬದ್ಧವಾಗಿ ಮಾತನಾಡುವಾಗ ಕ್ರಿಯಾಲೋಪವನ್ನು ಎತ್ತಬಾರದು. ಆದರೆ ಈಗ ಮಾನ್ಯ ಸದಸ್ಯರು ಮಾತನಾಡಿ ಮುಗಿಸಿರುವುದರಿಂದ ಅವರು ಕ್ರಿಯಾಲೋಪ ವನ್ನು ಎತ್ತಿ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವತ್ತಿನ ಚರ್ಚೆಯನ್ನು ನೋಡಿದರೆ ತಾವು ಈ ಸಭೆಯನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡಿಲ್ಲವೇನೋ ಎನ್ನುವ ಅನುಮಾನ ಬರುತ್ತಿದೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಈ ಸಭೆಯ ಒಂದು ಸಣ್ಣ ಸಮಿತಿ. ಈ ಸಭೆ ಯಾವ ಯಾವ ದಿವಸ ಯಾವ ಯಾವ ವಿಷಯಗಳನ್ನು ಚರ್ಚಿಸಬೇಕೆಂದು ನಿಗದಿಮಾಡುತ್ತದೆ. ಈ ಸಭೆಯ ಒಪ್ಪಿಗೆಯನ್ನು ಪಡೆದ ನಂತರ ಮುಂದಿನ ಕಾರ್ಯಕ್ರಮವನ್ನು ತೆದಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ಏನು ರೂಲಿಂಗ್ ಕೊಡಲಾಗಿದೆ ಅದನ್ನು ಪುನರ್ ಪರಿಶೀಲಿಸಬೇಕೆಂದು ನಾನು ಮೊದಲೇ ಹೇಳಿದೆ. ಈ ಸಭೆಯಲ್ಲಿ ಬರತಕ್ಕ ರೂಲಿಂಗ್‌ಗಳು ಬೇರೆ ಸಭೆಗಳಲ್ಲೂ ಬಂದು ಪ್ರತಿಪಾದನೆ ಮಾಡಬೇಕಾಗುತ್ತದೆ ಆದುದರಿಂದ ತಾವು ಇದನ್ನು ಪುನರ್‌ಪರಿಶೀಲನೆ ಮಾಡಬೇಕಾಗಿದೆ. ಬಿಸಿನೆಸ್ ಅಡ್ವೈಸರಿ ಸಮಿತಿಯಲ್ಲಿ ತೀರ್ಮಾನವಾಗಿ ಅದಕ್ಕೆ ೨½ ಗಂಟೆಕಾಲ ಚರ್ಚೆಗೆ ಅವಕಾಶ ಕೊಡಬೇಕೆಂದು ಆಗಿದೆ. ಅದಾದರೂ ಇಲ್ಲಿ ಬರಬೇಕಾಗಿತ್ತು. ನಾನಾದರೂ ಒಂದು ಉದಾಹರಣೆ ಕೊಟ್ಟು ಒಂದು ದಿವಸ ಈ ಸಭೆಯಲ್ಲಿ ೧೦ ಪ್ರಶ್ನೆಗಳು ಬರುತ್ತವೆ. ಅದರಲ್ಲಿ ೫ ಪ್ರಶ್ನೆಗಳಿಗೆ ಇಲ್ಲಿ ಉತ್ತರ ಸಿಕ್ಕುತ್ತದೆ. ಉಳಿದ ೫ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆ. ಆ ಲ್ಯಾಪ್ಸ್ ಆದ ಪ್ರಶ್ನೆಗಳನ್ನು ನಾಳೆ ದಿವಸ ತೆಗೆದುಕೊಳ್ಳುತ್ತೀರಾ ? ಎಂದು ಕೇಳಿದ್ದೇನೆ. I do not want the Secretaries to advise the Chair quite often. It does not help also. ತಾವು ಏನು ರೂಲಿಂಗ್ ಕೊಟ್ಟಿದ್ದೀರಿ ಅದಕ್ಕೆ ನಾನು ಬದ್ಧನಾಗಿದ್ದೇನೆ. ಮತ್ತೆ ನಾನು ಅದೇ ವಿಚಾರವನ್ನು ಪ್ರಸ್ತಾಪ ಮಾಡುವ ಅವಕಾಶವನ್ನು ಮಾನ್ಯ

ಸದಸ್ಯರಾದ ನಾಸಯ್ಯನವರೇ ಒದಗಿಸಿಕೊಟ್ಟಿದ್ದಾರೆ. ನಿನ್ನೆಯ ದಿವಸ ೨½ ಗಂಟೆ ಕಾಲ ಚರ್ಚೆಗೆ ಅವಕಾಶ ಕೊಟ್ಟಿರುವುದಾಗಿ ಹೇಳಿದ್ದಾರೆ. ಅದು ಸಭೆಯ ಮುಂದೆ ಬರಬೇಕಾಗಿದೆ. ಇದನ್ನು ತಾವು ಪರಿಶೀಲಿಸಬೇಕು.

SRI A.G. KODGI.—Sir, I have a point of order. My point is, can a Member be allowed to make a speech on his point of order? If it is allowed I think you are setting a bad precedent.

CHAIRMAN.—In the first place I would like to advise the hon. Members not to interrupt when a Member is on his legs. If this minimum code of conduct is not maintained it will be very difficult for the Chair to conduct the business of this august House.

SRI D. DEVARAJ URS.—Yes, Sir, as suggested by the Speaker we should follow minimum code of conduct to maintain the decency and decorum of this august House. When there is already a ruling by the Speaker there cannot be "ವ್ಯಾಖ್ಯಾನ" Is that minimum code of conduct we expect from the Members? Therefore, please let me know whether we should participate in the debate or we should not participate...

ಛೇರ್ಮನ್.—ಈಗಾಗಲೇ ಈ ವಿಚಾರ ದಿನದ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿರುವುದರಿಂದ ಮತ್ತು ಅಧ್ಯಕ್ಷ ಸ್ಥಾನದಿಂದ ಒಂದು ಹುಕುಂ ಸಿಕ್ಕಿರುವುದರಿಂದ ಅದಕ್ಕನುಸಾರವಾಗಿ ಕಾರ್ಯಕ್ರಮಗಳನ್ನು ನಡೆಸಬೇಕಾಗಿದೆ. ಸದಸ್ಯರು ಕೊಟ್ಟಂಥ ವಿಷಯಗಳನ್ನು ಪುನರ್ ಪರಿಶೀಲಿಸುವ ಹಕ್ಕು ಇದ್ದರೂ ಕೂಡ ಅಧ್ಯಕ್ಷರು ಈಗಾಗಲೇ ಒಂದು ಅಂತಿಮ ತೀರ್ಮಾನವನ್ನು ಕೊಟ್ಟಿರುವುದರಿಂದ ಮತ್ತೆ ಅದೇ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ಸಾಧ್ಯವಿಲ್ಲ.

SRI SHEERNALY CHANDRASEKHAR.—Sir, it is not with regard to admissibility. After the resolution is moved it is for the maintainability of the resolution...

೫.೦೦ ಪಿ.ಎಂ.

† ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು).—ಈ ಒಂದು ಪ್ರಶ್ನೆ ಹಿಂದೆ ಸದನದ ಮುಂದೆ ಬಂದಿದೆ. ಸದನದ ಮುಂದೆ ಬಂದಾಗ ಇದರ ಬಗ್ಗೆ ನಾವು ಮಾನ್ಯ ವಿರೋಧಪಕ್ಷದ ನಾಯಕರು ಇದನ್ನು ಮೂವ್ ಮಾಡಬೇಕೆ, ಬೇಡವೆ ಎನ್ನುವ ಪ್ರಶ್ನೆ ಚರ್ಚೆ ಆಯಿತು. ಅದೇ ಪ್ರಕಾರ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿ ಅಲ್ಲಿ ವಿಷಯ ಚರ್ಚೆಗೆ ಬಂದು ಅದನ್ನು ವಿರೋಧ ಪಕ್ಷದ ನಾಯಕರು ಮೂವ್ ಮಾಡಲಿ, ಅದನ್ನು ಅಡ್ಮಿಟ್ ಮಾಡಿಕೊಳ್ಳುವುದು ಬಿಡುವುದು ಚರ್ಚೆಯಾಗಬೇಕಾದ ವಿಷಯ ಎಂದು ಆವತ್ತಿನ ದಿವಸ ತೀರ್ಮಾನ ಆಯಿತು. ನಿನ್ನೆ ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿ ಇದಕ್ಕೆ ನಾಲ್ಕು ಗಂಟೆಯ ಮೇಲೆ ಎರಡೂವರೆ ಗಂಟೆಗಳ ಕಾಲ ಸಮಯ ಕೊಡುವುದು ಎಂದು ತೀರ್ಮಾನ ಮಾಡಿತು. ಈಗ ವಿಷಯವನ್ನು ಮೂವ್ ಮಾಡಬೇಕೇ, ಮೂವ್ ಮಾಡಕೂಡದೇ ಎಂದು ಚರ್ಚೆ ಮಾಡುವುದರಲ್ಲಿಯೇ ಸಮಯ ಕಳೆಯುವುದು ಬೇಡ ಆಗಲೇ ವಿಷಯವನ್ನು ಮೂವ್ ಮಾಡಿದ್ದಾರೆ. ಈಗ ಇದನ್ನು ಚರ್ಚೆ ಮಾಡಲಿಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ ಬಂದಿದೆ. ಬಿಸಿನೆಸ್ ಅಡ್ವೈಸರಿಯಲ್ಲೂ ಈ ವಿಷಯ ಬಂದಿತ್ತು. ಹಿಂದೆ ಈ ವಿಷಯ ಬಂದಾಗ ಹೈಕೋರ್ಟಿನಲ್ಲಿ ಇದೇ ಪ್ರಶ್ನೆ ಇದ್ದಾಗ ಇದು ಸಬ್‌ಜ್ಯುಡೀಸ್ ಆಗುತ್ತದೆಂದು ಕೇಂದ್ರದಲ್ಲಿ ಅಂದಿನ ಪ್ರಧಾನಮಂತ್ರಿಗಳೂ ಮತ್ತು ಗೃಹಮಂತ್ರಿಗಳೂ ಉತ್ತರ ಕೊಟ್ಟಿದ್ದರು. ಆದ್ದರಿಂದ ಅಧ್ಯಕ್ಷರು ಇದನ್ನು ಪರಿಶೀಲನೆ ಮಾಡಿ ತಮ್ಮ ರೂಲಿಂಗ್ ಕೊಡಬೇಕು. ಅಡ್ಮಿಸಿಬಿಲಿಟಿಗೆ ಅವಕಾಶ ಮಾಡಿಕೊಟ್ಟರೆ ಅದರ ಮೇನ್‌ಟೈನೆಬಲಿಟಿಗೂ ಅವಕಾಶ ಕೊಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.--ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಮಾತನ್ನೇ ನಾವು ಹೇಳುವುದಾದರೆ ಅಡ್ಮಿಸಿಬಿಲಿಟಿ ಆದರೆ ಮೇನ್‌ಟೇನೆಬಿಲಿಟಿ ಬಗ್ಗೆ ವಿಚಾರ ಮಾಡೋಣವೆಂದು ಹೇಳಿದ್ದು ಎಂದು ನಾನು ತಿಳಿದುಕೊಂಡಿದ್ದೇನು.

ವೈಸ್-ಚೇರ್‌ಮನ್.—ಈ ಪ್ರಶ್ನೆಯೂ ನ್ಯಾಯಾಂಗ ಪರಿಶೀಲನೆಯಲ್ಲಿರುವಾಗ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದು ಕಾನೂನು ಬಾಹಿರ, ಕ್ರಮ ಬಾಹಿರವಲ್ಲವೇ?

ಶ್ರೀ ಹೆಚ್.ಡಿ. ದೇವೇಗೌಡ—ಮಾನ್ಯ ಅಧ್ಯಕ್ಷರೆ, ಹಿಂಭಾಗದಲ್ಲಿ ಕುಳಿತುಕೊಂಡಿರತಕ್ಕಂಥ ನಮಗೂ ಅವಕಾಶವಿರಬೇಕೆಂದು ಹೇಳುತ್ತೇನೆ. ಸರ್ಕಾರ ಸದನದ ಕಾರ್ಯಕಲಾಪಗಳನ್ನು ನಡೆಸುತ್ತಿರುವಾಗ ಅವರಿಗೆ ಸಹಾಯವಾಗುವಂಥ ರೀತಿಯಲ್ಲಿ ಕಾರ್ಯಕ್ರಮಗಳ ಪಟ್ಟಿಯನ್ನು ನಾವು ನಿರ್ಣಯ ಮಾಡುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿರತಕ್ಕಂಥದ್ದು ಇರುತ್ತದೆ. ಆ ಸಮಿತಿ ನಿರ್ಣಯಗಳನ್ನು ಕ್ರಮಬದ್ಧವಾಗಿ ಮಾಡಿಕೊಂಡು ಎಷ್ಟು ಕಾರ್ಯಕಲಾಪಗಳನ್ನು ನಡೆಸಬೇಕು, ಯಾವ ಯಾವ ವಿಷಯಗಳಿಗೆ ಸಂಬಂಧಪಟ್ಟಂತೆ ಎಷ್ಟು ಕಾಲಬೇಕು ಎಂಬುದನ್ನೆಲ್ಲಾ ನಿಗದಿಮಾಡಿ ನಿರ್ಣಯ ಮಾಡುತ್ತದೆ. ಹಾಗೆ ನಿರ್ಣಯ ಮಾಡಿದಮೇಲೆ ಸಮಿತಿಯು ಒಂದು ವರದಿಯನ್ನು ತಯಾರು ಮಾಡುತ್ತದೆ. ತಯಾರು ಮಾಡಿದಂಥ ವರದಿಯನ್ನು ತಾವು ಈ ಸದನಕ್ಕೆ ತಿಳಿಸಬೇಕು. ಒಂದುವೇಳೆ ಅದು ಮಾಡತಕ್ಕಂಥ ಕರ್ತವ್ಯದಲ್ಲಿ ಏನಾದರೂ ಲೋಪವಾಗಿದ್ದರೆ ಅದರ ಬಗ್ಗೆ ಯಾವುದೇ ರೀತಿಯ ಆಪಾದನೆಗಳನ್ನು ಮಾಡುವುದಕ್ಕೆ ಹೋಗುವುದಿಲ್ಲ. ಈಗ ಈ ವಿಷಯದ ಬಗ್ಗೆ ನೆನ್ನೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿದ್ದರೆ ಅದನ್ನು ಸಂಪ್ರದಾಯದ ಪ್ರಕಾರ ಈ ಸದನಕ್ಕೆ ತಿಳಿಸಬೇಕಾಗಿತ್ತು. ನಿನ್ನೆ ನಾಲ್ಕಾರು ಘಂಟೆಗಳ ಕಾಲ ಚರ್ಚೆಯಾಗಿ ಮೂವ್ ಮಾಡುವುದಕ್ಕೆ ಪರ್ಮಿಷನ್ ಇದೆ ಎಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಚರ್ಚೆಗೆ ಇಡಲಿ ಎಂದೂ ಕೂಡ ನೆನ್ನೆ ಹೇಳಿದರು. ಇಲ್ಲಿ ಏನಾಗಿದೆ ಎಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿ ಈಗ ಅಂದು ಹಿಂದೆ ಸರಿಯುವುದಾದರೆ ಬಹುಶಃ ಈ ಸಮಿತಿಯ ಅವಶ್ಯಕತೆಯಾದರೂ ಏನು? ನಿನ್ನೆ ನಾಲ್ಕು ಘಂಟೆಗಳ ಕಾಲ ವಿಷಯ ಚರ್ಚೆಯಾಗಿ ಎರಡೂ ಕಡೆಯವರು ಅಂದರೆ ಈ ಮನೆಯ ನಾಯಕರು, ಪಾರ್ಲಿಮೆಂಟ್ ಅಫೇರ್ಸ್ ಮಿನಿಸ್ಟರು ಹಾಜರಿದ್ದು ಅವರು ಒಪ್ಪಿಕೊಂಡಿದ್ದಾರೆ. ಈ ನಿರ್ಣಯ ರಾಜ್ಯ ಸಭೆಯಲ್ಲಿ ಬಂದು ಚರ್ಚೆಯಾಗಿ ಇದಕ್ಕೆ ಅಲ್ಲಿಯೂ ಕೂಡ ರೂಲಿಂಗ್ ಕೊಟ್ಟಿದ್ದಾರೆ. ಆ ಒಂದು ಆಧಾರದ ಮೇಲೆ ಈ ನಿರ್ಣಯವನ್ನು ಮಂಡಿಸಿದ್ದೇವೆ. ಈಗ ತಾವು ಹಿಂದೆ ಸರಿಯುವುದಾದರೆ ಇನ್ನು ಮುಂದೆ ನಾವು ಈ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ದೇವೇಗೌಡರು ಈ ಎಲ್ಲಾ ಇಷ್ಯೂವನ್ನು ಡೈವರ್ಟ್ ಮಾಡುತ್ತಿದ್ದಾರೆ.

ವೈಸ್ ಚೇರ್‌ಮನ್,—ಅದರ ಮೇಲೆ ಚರ್ಚೆ ಬೇಡವೆಂದು ಹೇಳುತ್ತೇನೆ.

SRI M. CHANDRASHEKHAR.—The Resolution is under Section 146 which is governed by Section 148. As per Section 148 (a), if it is pending before any Court of law, it cannot be discussed. The case is pending before the Supreme Court.

ಶ್ರೀ ಎಂ. ವೀರಪ್ಪ ಮೊಯಿಲಿ.—ವಿರೋಧಪಕ್ಷದ ನಾಯಕರು ಹೇಳುವ ಮೊದಲು ನಾನು ಒಂದು ಮಾತನ್ನು ಹೇಳುತ್ತೇನೆ. ವಿರೋಧಪಕ್ಷದ ನಾಯಕರು ಮೂವ್ ಮಾಡಿದ್ದಾರೆ. ಮೂವ್ ಮಾಡಿದ ಮೇಲೆ ಸದನದ ಮುಂದೆ ಇರತಕ್ಕಂಥ ವಿಚಾರ ಏನೆಂದರೆ ಸಬ್‌ಜ್ಯುಡೀಸ್ ಪ್ರಶ್ನೆ. ವಿರೋಧಪಕ್ಷದ ನಾಯಕರು ಅದು ಸಬ್‌ಜ್ಯುಡೀಸ್ ಆಗುತ್ತದೋ ಇಲ್ಲವೋ ಅದು ಬೇರೆ ಪ್ರಶ್ನೆ. ಅದಕ್ಕೆ ಸೀಮಿತವಾಗಿ ಮಾತನಾಡಿ ಉಳಿದ ಸದಸ್ಯರಿಗೂ ಕೂಡ ಮಾರ್ಗ ಮಾಡಲಿ ಎಂದು ಸೂಚಿಸಿದ್ದಾರೆ. ಸಬ್‌ಜ್ಯುಡಿಸ್ ಮೇಲೆ ಮಾತನಾಡುವಾಗ ನಾವು ಏನೂ ತಡೆ ಮಾಡುವುದಿಲ್ಲ. ಅಧ್ಯಕ್ಷರ ಮೂಲಕ ಸದನದ ಸಹಾಯ ಕೇಳುವುದೇನೆಂದರೆ ಸಬ್‌ಜ್ಯುಡೀಸ್‌ಗೆ ಸೀಮಿತವಾಗಿ ಮಾತ್ರ ಚರ್ಚೆ ಮಾಡಲಿಕ್ಕೆ ಅನುಮತಿ ಕೊಟ್ಟು ಅದರ ಮೇಲೆ ತಮ್ಮ ರೂಲಿಂಗ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಸಭೆಯ ಮುಂದೆ ಅಧ್ಯಕ್ಷರ ಅಪ್ಪಣೆ ಮೇರೆಗೆ ಠರಾವನ್ನು ಮಂಡಿಸಿರತಕ್ಕಂಥಾದ್ದು ಇದು ಸಬ್‌ಜ್ಯುಡೀಸ್ ಆಲ್ಲವೇ ಎನ್ನುವುದು ಈಗಿರುವ ಪ್ರಶ್ನೆ. ಸಬ್‌ಜ್ಯುಡೀಸ್ ಆಗುವುದಾದರೆ ಹೇಗೆ ಆಗುತ್ತದೆ? ಸಬ್‌ಜ್ಯುಡೀಸ್ ಅಲ್ಲ ಎನ್ನುವುದಾದರೆ ಏನು ಕಾರಣವಿದೆ? ಎನ್ನುವುದನ್ನು ಅವರು ಹೇಳಬೇಕು. ಈಗ ನಾನು ತಂದಿರುವ ಠರಾವು "situation arising out of the 'dissolution of the Assemblies without assigning any reasons by the proclamation of the President to be taken into considerations." ಅಸೆಂಬ್ಲಿ ಡಿಸಾಲ್ವ್ ಮಾಡಿರತಕ್ಕಂಥ ಆರ್ಡರನ್ನು ನಾವು ಸರಿ ತಪ್ಪು ಎನ್ನುವ ತೀರ್ಮಾನಕ್ಕೆ ಹೋಗಿಲ್ಲ. ಅಲಹಬಾದ್ ಕೋರ್ಟಿನಲ್ಲಿಯಾಗಲಿ, ಇಂಡಿಯಾದ ಯಾವುದೇ ಕೋರ್ಟಿನಲ್ಲಿಯಾಗಲಿ ಈಗ ಕ್ವೆಶ್ಚನ್ ಮಾಡಿರತಕ್ಕಂಥದು ಪ್ರೆಸಿಡೆನ್ಸಿಯಲ್ ಆರ್ಡರ್ ರಿಗಾರ್ಡಿಂಗ್ ಡಿಸಾಲ್ವ್ ಆಫ್ ದಿ ಅಸೆಂಬ್ಲಿ ಎಂದು ನಾವು ತಿಳಿದುಕೊಂಡಿರುತ್ತೇವೆ.

ಇದರ ಬಗ್ಗೆ ನಿನ್ನೆ ರಾಜ್ಯ ಸಭೆಯಲ್ಲಿ ಏನು ತೀರ್ಮಾನ ಆಗಿದೆ ಅದು ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಆ ವರದಿಯ ಪ್ರಕಾರ ಅವರು ಇದನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಏನನ್ನು ಚರ್ಚೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ? ಪ್ರೆಸಿಡೆಂಟರ ಪ್ರೊಕ್ಲಮೇಷನ್ ಆರ್ಡರನ್ನು ರಿವೋಕ್ ಮಾಡಿ ಎಂದು ರಿಸಲ್ಯೂಷನ್‌ನ್ನು ತಂದಿದ್ದರು. ಇದು ಆ ವರದಿಯ ಪ್ರಕಾರ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ They have asked in the Resolution to revoke the very proclamation promulgated by the President of India that is before the Court. That is why he has ruled that the resolution is out of bounds. It is not in accordance with the rules. It is *sub-judice*, because it is before the Court. ಎಂದು ಹೇಳಿದ್ದಾರೆ. ಇಲ್ಲಿ ನಾವು ರಿವೋಕ್ ಮಾಡಿ ಎಂದು ಕೇಳುವುದಿಲ್ಲ. ಇದರಿಂದ ಪರಿಣಾಮ ಏನು ಆಗುತ್ತದೆ ಎಂದು ಹೇಳುವುದಕ್ಕೆ ಈ ರಿಸಲ್ಯೂಷನ್‌ನ್ನು ತಂದಿರತಕ್ಕದ್ದು. ೧೯೭೭ನೇ ಇಸವಿಯಲ್ಲಿ ಜನತಾ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ಇದೇ ರೀತಿಯಾಗಿ ಒಂಭತ್ತು ರಾಜ್ಯಗಳಲ್ಲಿ ಇದ್ದಂತಹ ಅಸೆಂಬ್ಲಿಗಳನ್ನು ಡಿಸಾಲ್ವ್ ಮಾಡಿದರು. ಆ ಕಾಲದಲ್ಲೂ ಇದರ ಪರವಾಗಿಯೂ ವಿರೋಧವಾಗಿಯೂ ವಾದ ವಿವಾದಗಳು ನಡೆದವು. ಇದು ಕೋರ್ಟಿಗೆ ಹೋಯಿತು. ಕೋರ್ಟಿನಲ್ಲಿ ಈ ಬಗ್ಗೆ ತೀರ್ಮಾನ ಆಯಿತು. ಅದೇ ಕಾಲದಲ್ಲಿ ಆಗಿನ ಕಾಂಗ್ರೆಸ್–ಐ ಪಕ್ಷದಲ್ಲಿ ಈಗ ಈ ಸದನದ ಆಡಳಿತ ಪಕ್ಷದಲ್ಲಿ ಕುಳಿತಿರುವವರು ಹಾಗೂ ನಾನೂ ಎಲ್ಲಾ ಒಂದೇ ಪಕ್ಷದಲ್ಲಿ ಇದ್ದೆವು, ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ನಡೆಯುತ್ತಾ ಇದ್ದ ಪಕ್ಷದಲ್ಲಿ ಇದ್ದೆವು. ಆಗಿನ ಕಾಲದಲ್ಲಿ ನಮ್ಮ ಆಗಿನ ಕಾಲದ ಪಕ್ಷದ ವರ್ಕಿಂಗ್ ಕಮಿಟಿಯವರು ಈ ರೀತಿಯಾಗಿ ಏನು ೯ ರಾಜ್ಯಗಳಲ್ಲಿ ಅಸೆಂಬ್ಲಿಗಳನ್ನು ರದ್ದು ಮಾಡಿರತಕ್ಕ ವಿಷಯ ಏನಿತ್ತು ಅದರ ಬಗ್ಗೆ ಒಂದು ಠರಾವನ್ನು ಮಾಡಿ ಅದನ್ನು ಖಂಡನ ಮಾಡಿ ಇದು ಪ್ರಜಾಸತ್ತಾತ್ಮಕವಾದಂತಹ ಅಭಿವೃದ್ಧಿಗೆ ವಿರೋಧವಾದುದು ಎಂದು ಹೇಳಿದೆವು.

SRI D. DEVARAJ URS.—It is beyond all political propriety. It impairs the federal structure and erodes the economy of the State. The dissolution of the 9 Assemblies by the Central Government is totally undemocratic and contrary to all norms of the Constitutional and political propriety. ಈ ಒಂದು ಠರಾವಿಗೆ ನಾನೂ ಒಂದು ರೀತಿಯಲ್ಲಿ ಭಾಗಿಯಾಗಿದ್ದೆ ನಮ್ಮ ಸರ್ಕಾರ ನಡೆಸತಕ್ಕ ಪಕ್ಷದ ಸದಸ್ಯರು, ಮಾನ್ಯ ಮುಖ್ಯಮಂತ್ರಿಗಳೂ ಈ ಠರಾವಿಗೆ ಭಾಗಿಯಾಗಿದ್ದಂತವರೇ. ನಾವೂ ಇವರೂ ಅಷ್ಟೇ ಅಲ್ಲ. ಈಗ ಕೇಂದ್ರದಲ್ಲಿ ಪ್ರಧಾನಮಂತ್ರಿ ಆಗಿರತಕ್ಕವರೂ ಕೂಡ ಈ ಠರಾವಿಗೆ ಭಾಗಿಗಳಾಗಿದ್ದವರೇ. ಅವರ ಒಂದು ನೇತೃತ್ವದಲ್ಲಿ ಈ ಒಂದು ಠರಾವು ಬರಲು ಕಾರಣವಾಗಿತ್ತು.

SRI G. P VADEYARAJ.—I am on a point of order. While substantiating the case on the maintainability of this resolution, the Hon. Leader of the Opposition is trying to argue his own case. The question is the Leader of the Opposition has pointed out that the

question was raised before the Lok Sabha about the revokation of the President Order. My point is that he is trying to substantiate his own case by going intonmerits and de-merits and other details required for the Presidential orders. He may kindly be asked not to go into details.

CHAIRMAN.—While making out a case, he pointed out that the matter will be *sub-judice* because this has taken place in the past and it is yet to be decided.

SRI D. DEVARAJ URS.—There was a type of re-action when such a situation was there in 1977. I am trying to bring it to the notice of the House. ಯಾರು ಆ ಕಾಲದಲ್ಲಿ ಇಂತಹ ಒಂದು ಕಾರ್ಯಕ್ರಮವು ಅನ್ ಡೆಮೋಕ್ರಟಿಕ್ ಆಗಿದೆ, ಫೆಡರಲ್ ಕಾನ್ಸ್ಟಿಟ್ಯೂಷನ್‌ಗೆ ಧಕ್ಕೆ ತರುತ್ತದೆ ಎಂದು ಹೇಳಿದರೋ ಆ ಒಂದು ಫೆಡರಲ್ ಕಾನ್ಸ್ಟಿಟ್ಯೂಷನ್‌ಗೆ ಯಾವ ರೀತಿಯ ಧಕ್ಕೆ ಬರುತ್ತಾ ಇದೆ ಎನ್ನುವುದನ್ನು ಪ್ರಸ್ತಾಪ ಮಾಡುವುದಕ್ಕಾಗಿ ಈ ಪ್ರಶ್ನೆಯನ್ನು ಇಟ್ಟಿದ್ದಾರೆಯೇ ಹೊರತು ಅಧ್ಯಕ್ಷರು ಏನು ಒಂದು ಪ್ರೊಮಲ್‌ಗೇಷನ್‌ನ್ನು ಹೊರಡಿಸಿದ್ದಾರೆ. ಅದನ್ನು ಟೀಕೆ ಮಾಡುವುದು, ಬಿಡುವಂತಹ ಪ್ರಶ್ನೆ ಇಲ್ಲಿ ಇಲ್ಲ. ಪ್ರೆಸಿಡೆಂಟ್ ಆರ್ಡರ್ ಇದೆ, ಅದು ಜಾರಿಗೆ ಬರುತ್ತಾ ಇದೆ. ಅದನ್ನು ಈ ಠರಾವು ತಂದು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ, ಅಧಿಕಾರ ಇಲ್ಲ. ಅದಕ್ಕೆ ಕೋರ್ಟ್ ಇದೆ. ನಮ್ಮ ಕರ್ನಾಟಕ ರಾಜ್ಯ ನಮ್ಮ ಭಾರತ ದೇಶದಲ್ಲಿ ಒಂದು ಅಂಗ ಇದ್ದಂತೆ. ಇದು ಒಂದು ರಾಜ್ಯವಾಗಿದೆ. ಇಂತಹ ಒಂದು ಈ ಕಾರ್ಯಕ್ರಮದಿಂದ ನಮ್ಮ ರಾಜ್ಯಕ್ಕೆ ಯಾವ ರೀತಿಯಾಗಿ ಈ ಫೆಡರಲ್ ಕಾನ್ಸ್ಟಿಟ್ಯೂಷನ್‌ಗೆ ಚ್ಯುತಿ ಬರುತ್ತದೆ, ಹಾಗೂ ರಾಜ್ಯಗಳಿಗೆ ಇರತಕ್ಕ ಕೆಲವು ಹಕ್ಕುಭಾಧ್ಯತೆಗಳು ಏನಿವೆ ಅವುಗಳಿಗೆ ಚ್ಯುತಿ ಬಂದಿರುವುದರಿಂದ ಇದರಿಂದ ಮುಂದೆಯೂ ಕೂಡ ಪರಿಣಾಮ ಕೆಟ್ಟದ್ದು ಆಗುವುದರಿಂದ ಇದನ್ನು ನಾನು ತಮ್ಮ ಮುಂದೆ ತಂದಿರುವುದು. ಇದು ಸಬ್ಜುಡೀಸ್ ಆಗುವುದಕ್ಕೆ ಕಾರಣವಿಲ್ಲ. ಫೆಡರಲ್ ಕಾನ್ಸ್ಟಿಟ್ಯೂಷನ್ ಯಾವ ರೀತಿ ಧಕ್ಕೆ ಬರುತ್ತದೆಂದು ಪ್ರತಿಪಾದನೆ ಮಾಡುವುದಕ್ಕೆ ಸಬ್ಜುಡೀಸ್ ಅಲ್ಲ ಎನ್ನುವುದಕ್ಕೆ ತಮಗೆ ಡಾ. ಅಂಬೇಡ್ಕರ್ ಅವರು ಒಂದು ಸಂದರ್ಭದಲ್ಲಿ ಹೇಳಿರುವುದನ್ನು ಹೇಳುತ್ತೇನೆ.

> "Now, when once the Constitution makes the Provinces soveriegn and gives them plenary powers to make any law for the peace, order and good Government of the Province really speaking the intervention of the Centre or any other authority must be deemed to be barred because that would be an invasion of the sovereign authority of the Province That is the fundamental proposition which I think, we must accept by reason of the fact that we have a Federal Constitution."

ಎಂದರೆ ಇದರಿಂದ ನಾವು ಏನನ್ನು ಅರ್ಥ ಮಾಡಿಕೊಳ್ಳಬಹುದು? ತಾವು ಒಪ್ಪಿಕೊಳ್ಳದಿದ್ದರೂ ಪರವಾಯಿಲ್ಲ. ವಿಷಯವನ್ನು ತಿಳಿದುಕೊಳ್ಳುವುದಕ್ಕಾದರೂ ಇಷ್ಟಪಡಿ. ನಾಳೆ ನಿಮ್ಮ ಪರಿಸ್ಥಿತಿಯೂ ನಮ್ಮ ಹಾಗೆ ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಎಲ್ಲಾ ಕಾಲದಲ್ಲೂ ಶಾಶ್ವತವಾಗಿ ಇರುವುದಿಲ್ಲ. ದಯಮಾಡಿ ಸಾವಧಾನದಿಂದ ಕೇಳಿ ಅಂತ ನನ್ನ ಪ್ರಾರ್ಥನೆ.

The wording and intent in the 1950 Constitution leave considarable leeway between centralisation and decentralisation of powers, between protection of the rights of the individual and arbitrary use of Government power, a leeway which extremists, whether Coummunists or the Rightists, will take advantage in a

moment of national crisis. ಇದು ಈ ದೇಶಕ್ಕೆ ಬಂದಿರತಕ್ಕಂತಹದ್ದು. ರಾಜ್ಯಾಂಗ ಯಾವ ರೀತಿಯಲ್ಲಿದೆ ಎಂದರೆ, ಫೆಡರಲ್ ಹಾಗೂ ಇದೆ, ಯೂನಿಟರಿಯಾಗೂ ಇದೆ ಕಷ್ಟವಾಗಿರುವುದು. ಇದನ್ನು ಫೆಡರಲ್ ಅಂತ ಹೇಳುವುದಕ್ಕೂ ಆಗುವುದಿಲ್ಲ, ಅಥವಾ ಯೂನಿಟರಿ ಸಿಸ್ಟಂ ಅಂತಲೂ ಹೇಳುವುದಕ್ಕಾಗುವುದಿಲ್ಲ. ಒಬ್ಬರು ಹೇಳಿದ್ದಾರೆ, ಈ ಪದ್ಧತಿ ನ್ಯೂ ಡೆಮಾಕ್ರಸಿಗೆ ಲೀವೇ ಆಗುತ್ತದೆಂದು ಅಂದರೆ ಮಾರ್ಗ ಇದೆ ಅಂತ;—

AN. HON. MEMBER.—It is quasi federal.

ಶ್ರೀ ಡಿ. ದೇವರಾಜ್ ಅರಸ್.—It is both federal and unitary. ಅದ್ದರಿಂದ ಈ ಫೆಡರಲ್ ಅಂದರೆ ನಮಗೆ ಇರತಕ್ಕಂತಹ, ರಾಜ್ಯಕ್ಕೆ ಇರತಕ್ಕಂತಹ ಒಂದು ಹಕ್ಕು, ಸ್ವತಂತ್ರವಾದ ಹಕ್ಕು ಕೆಲವು ವಿಚಾರದಲ್ಲಿ, ಸ್ವತಂತ್ರವಾಗಿ ನಡೆಯತಕ್ಕಂತಹ ಕಾನೂನಿನ ಅಥವಾ ರಾಜ್ಯಾಂಗದ ಅವಕಾಶ ಏನಿದೆ ಅದಕ್ಕೆ ಧಕ್ಕೆ ಬಂದಿರತಕ್ಕಂತಹದ್ದನ್ನು ವಿಚಾರ ಮಾಡುವುದಕ್ಕೋಸ್ಕರ ಇಲ್ಲಿ ಠರಾವನ್ನು ತಂದಿದ್ದೇವೆಯೆ ಹೊರತು ಸಬ್‌ಜ್ಯುಡೀಸ್ ಅಂತ ಅಲ್ಲ. ಅವರು ಏತಕ್ಕೆ ಮಾಡಿದರು ? ಮಾಡಿದ್ದು ಕಾನೂನು ಪ್ರಕಾರ ಇದು ಸರಿಯೋ, ಅಥವಾ ತಪ್ಪೋ ಎನ್ನುವುದನ್ನು ಹೇಳುವುದಕ್ಕೆ ಬಂದಿಲ್ಲ. ಇದರ ಪರಿಣಾಮ ನಮ್ಮ ರಾಜ್ಯದ ಮೇಲೂ, ಅಂದರೆ ಇದು ಇಂಡಿಯಾ ದೇಶದಲ್ಲಿ ಒಂದು ಭಾಗವಾಗಿರುವುದರಿಂದ, ಇದು ನಮಗೂ ಅನ್ವಯಿಸತಕ್ಕಂತದ್ದು ಇದೆ. ಮತ್ತೆ ಇದು ನಮ್ಮ ದೇಶದ ಪ್ರಜೆಗಳಿಗೆ ಅನ್ವಯಿಸತಕ್ಕಂತಹದ್ದು ಇದೆ. ಮತ್ತೆ ಇದು ಇಂಡಿಯಾದ ಬೇರೆ ಬೇರೆ ರಾಜ್ಯಗಳಿಗೂ ಅನ್ವಯಿಸತಕ್ಕಂತಹದ್ದು ಇದೆ. ಅದನ್ನೇ ನಾವು ಇವತ್ತು ಪ್ರಸ್ತಾಪ ಮಾಡಬೇಕೆಂದಿರುವುದು. ಯಾವ ಕಾಲಕ್ಕೂ ಇಂಥಹ ನಿರ್ಣಯ ನಮಗೆ ಇರತಕ್ಕಂತಹ ಕಾನೂನು ಅಥವಾ ರಾಜ್ಯಾಂಗಕ್ಕೆಧಕ್ಕೆ ಎಂಬುದು ವಿಚಾರ. Each State has its own sovereignty within-its limits. ಅಂತ ಅವರು ಹೇಳಿದ್ದಾರೆ. ಅದಕ್ಕೆ ಇವತ್ತು ಧಕ್ಕೆ ಬಂದಿದೆ. ಜನತಾ ಪಕ್ಷದವರು ಮಾಡಿದರು ಅಂತ ಅದನ್ನೇ ಮುಂದುವರಿಸುವುದಾದರೆ, ಜನತಾ ಪಕ್ಷದವರು ತಪ್ಪು ಮಾಡಿದ್ದಾರೆಂದು ನೀವು ತಪ್ಪು ಮಾಡಬೇಕೆಂದೇನು ? ಅವರು ತಪ್ಪು ಮಾಡಿದ್ದಾರೋ, ಬಿಟ್ಟಿದ್ದಾರೋ ಅದನ್ನು ಕೋರ್ಟಿನಲ್ಲಿ ತೀರ್ಮಾನ ಮಾಡಿದ್ದಾರೆ. ಕೋರ್ಟಿನವರೂ ಇವರು ಮಾಡಿದ್ದು ಸರಿ ಅಂತ ಹೇಳಿಬಿಟ್ಟರು. ಈ ಪ್ರಶ್ನೆ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರುವುದು ಒಂದೇ ಕಾರಣ ಅಲ್ಲ. ಇದರಲ್ಲಿ ಪೊಲಿಟಿಕಲ್ ಪ್ರೊಪ್ರೈಟಿ ಒಂದು ಇದೆ. ಇದನ್ನು ನಾನು ಇವತ್ತು ಹೊಸದಾಗಿ ಏನನ್ನೂ ಹೇಳುತ್ತಿಲ್ಲ, ಯಾರು ಇವತ್ತು ಕೇಂದ್ರದಲ್ಲಿ ಸರ್ಕಾರವನ್ನು ನಡೆಸುತ್ತಿದ್ದಾರೋ ಅವರೇ ಮಾಡಿರತಕ್ಕಂತಹ ಒಂದು ರೆಸಲ್ಯೂಸನ್‌ನ್ನು ತೆಗೆದು ಮಾತನಾಡುತ್ತಿದ್ದೇನೆ. ಇದನ್ನು ೧೯೭೭ನೇ ಇಸವಿಯಲ್ಲಿ ಪೊಲಿಟಿಕಲ್ ಪ್ರೊಪ್ರೈಟಿ ಅಂತ ಹೇಳುವವರು ತಾವೇ ಅದೇ ಕೆಲಸವನ್ನು ಮಾಡಿದ್ದಾರೆ. ಇದು ಏನಾಗುತ್ತದೆಂದರೆ ಪೊಲಿಟಿಕಲ್ ಪ್ರೊಪ್ರೈಟಿಯನ್ನು ಕೊಶ್ಚನ್ ಮಾಡುತ್ತಾ ಹೋಗುವುದು ನನಗೆ ಇಷ್ಟವಿಲ್ಲ. ಲೀಗಲ್ ಆಗಿ ಅದಕ್ಕಾಗಿ ಕೋರ್ಟ್ ಇದೆ. ಕೋರ್ಟಿನಲ್ಲಿ ಅದನ್ನು ತೀರ್ಮಾನ ಮಾಡುತ್ತಾರೆ ಇವರು ಅದನ್ನು ಲೀಗಲ್ ಆಗಿ ಏನಾದರೂ ಮಾಡಿದ್ದಾರಾ ? Art. 356 If the President on receipt of a report from the Governer of a State or otherwise...'' ಇಲ್ಲೇ ಇರುವುದು. ಇದು ಇಲ್ಲವೇ ಇಲ್ಲ. ಯಾವ ಸ್ಟೇಟಗಳಲ್ಲೂ ಗೌರ್ನರಿಂದ ರಿಪೋರ್ಟ್ ಬರಲಿಲ್ಲ. ಹಾಗೆಂದ ಮೇಲೆ ಏನು ಮಾಡಿದರು. or otherwise ಇದನ್ನು ಹೇಗೆ ತೆಗೆದುಕೊಂಡಿದ್ದಾರೆ.

SRI M. VEERAPPA MOILY—The Hon. Leader of the Opposition is questioning the very propriety of the Presidential proclamation.

ಶ್ರೀ ಡಿ. ದೇವರಾಜ ಅರಸ್.—ಇಲ್ಲ. ನೀವೂ ಒಪ್ಪ ಬೇಕು. ಕೇಂದ್ರ ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಯಾವುದೇ ರಾಜ್ಯಗಳ ರಾಜ್ಯಪಾಲರು ಅಸೆಂಬ್ಲಿಯನ್ ವಿಸರ್ಜನೆ ಮಾಡುವುದಕ್ಕಾಗಿ ಕೇಂದಕ್ಕೆ ಶಿಫಾರಸ್ಸು ಮಾಡಿದ್ದಾರೋ ಇದ್ದರೆ ಹೇಳಿ ನಾನು ಒಪ್ಪುತ್ತೇನೆ. ಗೌರ್ನರ್ ಯಾರೂ ಎಲ್ಲಾದರೂ ಕಳುಹಿಸಿದ್ದಾರೆಯೇ ? ಇದ್ದರೆ ಹೇಳಿ. ಯಾರೂ ಕಳುಹಿಸಲಿಲ್ಲ. ಅದರ್‌ವೈಸ್ ಅಂತ ಇದೆಯಲ್ಲಾ ಅದನ್ನು ಉಪಯೋಗಿಸಿಕೊಂಡು ಇದನ್ನು ಮಾಡಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಅವರು ವಕೀಲರಲ್ಲದಿದ್ದರೂ, ವಕೀಲರಿಗಿಂತ ಚೆನ್ನಾಗಿ ಮಾತನಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸು.—ನಿಮ್ಮ ಪ್ರಯತ್ನ ನೆರವೇರಿದೆ. ನನ್ನ ಪ್ರಯತ್ನ ನೆರವೇರಲಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಏನು ಮಾಡುವುದು ಇದು ನನ್ನ ದುರಾದೃಷ್ಟ. ಇದು ಹೀಗೆ ಆಗುತ್ತದೆಂದು ನನಗೆ ಗೊತ್ತಿತ್ತು. ಅದಕ್ಕೆ ನಾನು ಇದನ್ನು ಅಜೆಂಡಾದಲ್ಲಿ ತೆಗೆದುಕೊಂಡು ಬರಬಾರದೆಂದು ಹೇಳಿದ್ದುದು. ಅಧ್ಯಕ್ಷರು ಇದನ್ನು ಒಪ್ಪಿದ್ದಾರೆ. ದುರ್ದೈವ, ಅವರು ಇದರ ಮೇಲೆ ಭಾಷಣ ಮಾಡುತ್ತಿದ್ದಾರೆ, ಅವರು ವಕೀಲರಾಗಿ ಹುಟ್ಟಬೇಕಾಗಿತ್ತು.

ಶ್ರೀ ಡಿ. ದೇವರಾಜ ಅರಸು.—ನಾನು ಬುದ್ಧಿವಂತ ಅಲ್ಲ ಆದ್ದರಿಂದ ಇಲ್ಲಿ ಇದ್ದೇನೆ. ಬುದ್ಧಿವಂತನಾಗಿದ್ದಿದ್ದರೆ ಅಲ್ಲೇ ಇರುತ್ತಿದ್ದೆ.

ಶ್ರೀ ಕೆ. ಎಚ್. ರಂಗನಾಥ್—ನಾನು ಬುದ್ಧಿವಂತ ಅಲ್ಲ, ಬುದ್ಧಿವಂತನಾಗಿ ಇಲ್ಲಿ ಇದ್ದೇನೆ, ನಾವು ಇಲ್ಲಿ ಇರುವ ಹಾಗೆ ಮಾಡಿದವರು ಅವರೇ, ಹೊರಗೆ ಬರುವುದಕ್ಕಿಂತ ಮುಂಚೆ ನೀವು ಎಲ್ಲರೂ ಹೋಗಿಬಿಡಿ ಅಂತ ಹೇಳಿದರು, ಅದಕ್ಕೇ ನಾನು ಇಲ್ಲಿದ್ದೇನೆ.

ಶ್ರೀ ಡಿ. ದೇವರಾಜ ಅರಸು.—ಪಾಪ ಇವರು ಸಣ್ಣ ಮಕ್ಕಳು ನನ್ನ ಸ್ಕೂಲಿನಲ್ಲಿ ಓದುತ್ತಿದ್ದಾರೆ, ನಾನು ಹೋಗಿಬಿಡಿ ಅಂತ ಹೇಳಿದಾಗ ಹೊರಟು ಹೋಗಿದ್ದಾರೆ, ಈಗ ನಾನು ಬಂದುಬಿಡಿ ಅಂತ ಹೇಳುತ್ತೇನೆ ಬಂದುಬಿಡಿ ನಾಳೆ

ಶ್ರೀ ಕೆ. ಎಚ್. ರಂಗನಾಥ್.—ಹಾಗೆಂದ ತಕ್ಷಣ ಬರಲಿಲ್ಲ. ಇದನ್ನು ಪ್ರಸ್ತಾಪ ಮಾಡಿ, ಅವರ ಎದುರಿಗೆ ಪ್ರಸ್ತಾಪ ಮಾಡಿಯಾದ ಮೇಲೆ ಬಂದಿದ್ದೇನೆ.

ಶ್ರೀ ಡಿ. ದೇವರಾಜ ಅರಸು.—ಅಧ್ಯಕ್ಷರೆ, ಈಗ ಆ ವಿಚಾರ ಬೇಡ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮೈನ್‌ಟನೆನ್ಸ್ ಬಗ್ಗೆ ರೂಲ್ಸ್ ಪ್ರಕಾರ ಹೇಳಬೇಕು. ಅಥವಾ ರಾಜ್ಯಾಂಗದ ಪ್ರಕಾರ ಏನಾಗುತ್ತದೆ ಎಂಬುದನ್ನು ಹೇಳಬೇಕು. ಅದನ್ನು ಹೇಳುವುದನು ಬಿಟ್ಟು, ಸಬ್‌ಜ್ಯುಡಿಸ್ ಅಂತ ಹೇಳಿ ಅರ್ಧ ಘಂಟೆ ಭಾಷಣ ಮಾಡುವುದು ಮತ್ತೆ ಪೊಲಿಟಿಕಲ್ ಮೊರಾಲಿಟಿ ಅಂತ ಹೇಳಿ ಅದನ್ನು ಅರ್ಧ ಘಂಟೆ ಭಾಷಣ ಮಾಡುವುದು, ನಂತರ ಫೆಡರಲ್ ಸ್ಟ್ರಕ್ಚರ್ ಅಂತ ಹೇಳಿ ಅದನ್ನು ಅರ್ಧ ಘಂಟೆ ಭಾಷಣ ಮಾಡುವುದು, ಹೀಗೆ ಮಾಡಿ ತಮ್ಮ ಉದ್ದೇಶವನ್ನು ಸಾಧನೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ, ಇದು ತಮಗೂ ಗೊತ್ತಿದೆ. ದಯಾಮಾಡಿ ಇದನ್ನು ಗಮನಕ್ಕೆ ತೆಗೆದುಕೊಳ್ಳಿ.

ಶ್ರೀ ಡಿ. ದೇವರಾಜ ಅರಸು.—ಕೆಲವು ಸಮಯದಲ್ಲಿ ನಮ್ಮ ಉದ್ದೇಶವನ್ನು ಸಾಧನೆ ಮಾಡಲೇಬೇಕಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನೀವು ಒಬ್ಬರೇ ಅಲ್ಲ, ನಾವೂ ಮಾಡಬೇಕಾಗುತ್ತದೆ.

ಶ್ರೀ ಡಿ. ದೇವರಾಜ ಅರಸು.—ಡೆಮಾಕ್ರಸಿ ಅಥವಾ ಪ್ರಜಾಪ್ರಭುತ್ವದಲ್ಲಿ ಈ ದೇಶದಲ್ಲಿರುವವರಿಗೆಲ್ಲಾ ನಾವು ಏನೇನು ಮಾಡುತ್ತಿದ್ದೇವೆನ್ನುವುದು ಗೊತ್ತಾಗಬೇಕು. ಅದು ಆಗಲೇಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಾವೇನು ಮಾಡಿದರೂ ಅದು ಪ್ರಜಾಪ್ರಭುತ್ವಕ್ಕನುಸಾರವಾಗಿ, ರಾಜ್ಯಾಂಗಕ್ಕನುಸಾರವಾಗಿ ಇರಬೇಕು.

ಶ್ರೀ ಬಿ.ವಿ. ಕಕ್ಕಿಲಾಯ.—ಕಾನೂನು ಅಡ್ಡಿ ಬರುವುದಾದರೆ. ಅದನ್ನು ಬೇಕಾದರೆ ಬದಲಾವಣೆ ಮಾಡೋಣ.

5-30 P. M.

